(ಇಂದು ದಿನಾಂಕ 15-03-2019 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀಸವಾಲು : 3ನೇ ಪ್ರತಿವಾದಿ ಪರ ಶ್ರೀ ಎಸ್.ಜಿ.ಎಸ್. ವಕೀಲರಿಂದ**

2. ನನ್ನ ತಂದೆ-ತಾಯಿಯವರು ಸಾಯುವ ತನಕ 3ನೇ ಪ್ರತಿವಾದಿ ರಾಮಾ ಸುಬ್ರಾಯ ಭಟ್ಟನ ಸಂಗಡ ವಾಸವಾಗಿದ್ದರು ಎಂದರೆ ಸರಿ. ಅವರ ಯೋಗ ಕ್ಷೇಮವನ್ನು 3ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದನು ಎಂದರೆ ಸರಿ. ನಾನು ಮಹಾರಾಷ್ಟ್ರದ ಪುಣೆಯಲ್ಲಿ ವಾಸವಿದ್ದೇನೆ ಎಂದರೆ ಸರಿ. ಮೃತ 6ನೇ ಪ್ರತಿವಾದಿ ಗಂಗುಬಾಯಿ ಹೊನ್ನಾವರದಲ್ಲಿ ವಾಸವಿದ್ದಳು. ಆಕೆ 2 – 3



ತಿಂಗಳ ಹಿಂದೆ ಮೃತಪಟ್ಟಿರುತ್ತಾಳೆ. ಆಕೆಗೆ 2 ಜನ ಗಂಡು ಮಕ್ಕಳು ಮತ್ತು ಒಬ್ಬಾಕೆ ಹೆಣ್ಣು ಮಗಳು ವಾರಸುದಾರರು ಇರುತ್ತಾರೆ. ನನ್ನ ತಂದೆ-ತಾಯಿಯ ಉತ್ತರಕ್ರಿಯೆಯನ್ನು 3ನೇ ಪ್ರತಿವಾದಿ ಮಾತ್ರ ನೆರವೇರಿಸಿರುತ್ತಾನೆ ಎಂದರೆ ಸರಿಯಲ್ಲ, ಸಾಕ್ಷಿ ನಾವೆಲ್ಲರೂ ಕೂಡಿ ನೆರವೇರಿಸಿರುತ್ತೇವೆ ಎಂದು ನುಡಿಯುತ್ತಾರೆ. ಸದ್ರಿ ಉತ್ತರಕ್ರಿಯೆಗೆ ಎಷ್ಟು ಖರ್ಚು ತಗಲಿದೆ ಎಂದು ನನಗೆ ಗೊತ್ತಿಲ್ಲ. ಸದ್ರಿ ಖರ್ಚನ್ನು 3ನೇ ಪ್ರತಿವಾದಿ ಮಾತ್ರ ಭರಿಸಿರುತ್ತಾನೆ ಎಂದರೆ ಸರಿಯಲ್ಲ. ನನ್ನ ತಂದೆಯ ಮರಣಾನಂತರ ತಾಯಿ ಆಸ್ಪತ್ರೆಯಲ್ಲಿ ದಾಖಲಾಗಿದ್ದಳು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ, ಏಕೆಂದರೆ 3ನೇ ಪ್ರತಿವಾದಿ ನನ್ನ ತಾಯಿಯನ್ನು ನನಗೆ ಭೇಟಿ ಮಾಡಲು ಅವಕಾಶ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. 3ನೇ ಪ್ರತಿವಾದಿಯೇ ನನ್ನ ತಾಯಿಯ ಉತ್ತರಕ್ರಿಯೆ ನೆರವೇರಿಸಿರುತ್ತಾನೆ ಎಂದರೆ ಸರಿ. ತಂದೆ-ತಾಯಿಯ ಯೋಗಕ್ಷೇಮವನ್ನು 3ನೇ ಪ್ರತಿವಾದಿ ನೋಡಿಕೊಳ್ಳಬೇಕು ಎನ್ನುವ ಷರತ್ತಿನ ಮೇರೆಗೆ ದಾವಾ ಆಸ್ತಿಯ ಪಹಣಿಪತ್ರಿಕೆಯಲ್ಲಿ ಆತನ ಹೆಸರನ್ನು ನಮೂದು ಮಾಡಲು ತಕರಾರು ಇಲ್ಲ ಎಂದು ಹೇಳಿ ನಾವೆಲ್ಲರೂ ಹಕ್ಕು ಬಿಟ್ಟು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

**4.** ಪ್ರತಿವಾದಿ ನಂ. 7 ಮೂ.ದಾ. ನಂ. 97/2012 ರಂತೆ ವಾಂಟಣಿ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದ್ರಿ ದಾವೆಯಲ್ಲಿ ನಾನು ಪಕ್ಷಗಾರಳಾಗಿದ್ದೆನು ಎಂದರೆ ಸರಿ. ಸದ್ರಿ ದಾವೆಯಲ್ಲಿ ನಾನು ಹಾಜರಾಗಿಲ್ಲ ಮತ್ತು ತಕರಾರು ಸಲ್ಲಿಸಿಲ್ಲ ಎಂದರೆ ಸರಿ. ಸದ್ರಿ ದಾವೆ 7ನೇ ಪ್ರತಿವಾದಿಯ ಪರವಾಗಿ ಡಿಕ್ರಿಯಾದದ್ದು ನನಗೆ ಗೊತ್ತು, ನನಗೆ ಹಕ್ಕು ಬೇಡ ಎಂದು ಸದ್ರಿ ದಾವೆಯಲ್ಲಿ ಭಾಗವಹಿಸಿಲ್ಲ ಎಂದರೆ ಸರಿಯಲ್ಲ, ಸದ್ರಿ ದಾವೆಯಲ್ಲಿ 3ನೇ ಪ್ರತಿವಾದಿಯೇ ತಕರಾರು ಸಲ್ಲಿಸಿದ್ದನು ಎಂದರೆ ನನಗೆ ಗೊತ್ತಿಲ್ಲ.

**5.** ನಾನು ದಾವಾ 'ಬ' ಮನೆಯನ್ನು ನೋಡಲು ಹೋಗಿರುವುದಿಲ್ಲ. ಈವರೆಗೂ ಹೋಗಿರುವುದಿಲ್ಲ. ಸದ್ರಿ ಮನೆಯಲ್ಲಿ ಎಲ್ಲೆಲ್ಲಿ ಯಾವ ರೀತಿ ಕೋಣೆಗಳು ಇದೆ ಎಂದು ನನಗೆ ಗೊತ್ತಿಲ್ಲ. ಸದ್ರಿ ಮನೆಯನ್ನು 3ನೇ ಪ್ರತಿವಾದಿ ಮಾಡಿಕೊಂಡಿರುತ್ತಾನೆ ಎಂದರೆ ಸರಿ. ಸದ್ರಿ ಮನೆಯಲ್ಲಿ ನನಗೆ ಹಕ್ಕು ಇಲ್ಲದ ಕಾರಣ ಅದನ್ನು ನಾನು ನೋಡಲು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ 'ಬ' ಮನೆ ಮತ್ತು ಜಾಗ 3ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಆತ ಯಾರಿಂದ ಅದನ್ನು ಖರೀದಿಸಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ಸದ್ರಿ ಮನೆ ಸ.ನಂ. 633 ರಲ್ಲಿ ಇರುತ್ತದೆ. ಮನೆ ಇರುವ ಒಟ್ಟೂ ಕ್ಷೇತ್ರ 12 ಆಣೆ ಇರುತ್ತದೆ. ಉಳಿದ ಆಸ್ತಿಗಳು ಖುಷ್ಕಿ ಜಮೀನುಗಳು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಗೆ ವೈದಿಕ ಉತ್ಪನ್ನ ಮಾತ್ರ ಬರುತ್ತಿತ್ತು, ಜಮೀನಿನಿಂದ ಉತ್ಪನ್ನ ಬರುತ್ತಿರಲಿಲ್ಲ.

**(ಈ ಹಂತದಲ್ಲಿ ಉಳಿದ ಪ್ರತಿವಾದಿಯರು ಮತ್ತು ಅವರ ಪರ ವಕೀಲರು ಗೈರು-ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ ಕುಮಟಾ